ಇ) ಈ ರೀತಿ ಸರ್ಕಾರದ ನೀತಿ ನಿಯಮಗಳ ಉಲ್ಲಂಘನೆಯಾದ ಬಗ್ಗೆ ಸಹಕಾರ ಸಂಘಗಳ ಕಾಯ್ದೆ ೧೯೫೯ ಸೆಕ್ಷನ್ ೬೪ರ ಅನ್ವಯ ವಿಚಾರಣೆ ನಡೆಸಲಾಗಿದ್ದು ಸದರಿ ವಿಚಾರಣಾ ಪರದಿಯ ಶಿಫಾರಸ್ಸಿನನ್ವಯ ಹಾಸನ ಹಾಲು ಒಕ್ಕೂಟದ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಹಾಸನ ಜಿಲ್ಲಾಧಿಕಾರಿಯವರನ್ನು ಸದರಿ ಒಕ್ಕೂಟಕ್ಕೆ ವಿಶೇಷಾಧಿಕಾರಿಯಾಗಿ ನೇಮಿಸಲಾಗಿದೆ. ತಪ್ಪಿತಸ್ಥರೆಂದು ಕಂಡು ಬಂದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿ ಕರ್ನಾಟಕ ಹಾಲು ಮಹಾ ಮಂಡಳಿಯ (ಕೆ. ಎಂ. ಎಫ್) ವ್ಯವಸ್ಥಾಪಕ ನಿರ್ದೇಶಕರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಹಾಸನ ಜಿಲ್ಲೆ ದುದ್ದ ಮಂಡಲ ಪಂಚಾಯಿತಿಯಲ್ಲಿ ಜವಹರ್ ರೋಜಗಾರ್ ಯೋಜನೆಯ ಹಣ ದುರುಪಯೋಗ

ಶ್ರೀ (ಡಾ||) ಬಿ. ಶಿವರಾಮು (ಗಂಡಸಿ).—ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಹಾಸನ ತಾಲ್ಲೂಕು ದುದ್ದ ಮಂಡಲ ಪಂಚಾಯಿತಿಯಲ್ಲಿ ಜವಹರ್ ರೋಜಗಾರ್ ಹಣವನ್ನು ದುರುಪಯೋಗ ಮಾಡಿಕೊಂಡು ಅಂಗಡಿ ಮಳಿಗೆಗಳನ್ನು ನಿರ್ಮಿಸಲಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಇದಕ್ಕೆ ಯಾವುದೇ ತಾಂತ್ರಿಕ ಮಂಜೂರಾತಿ ನೀಡಿರುವುದಿಲ್ಲ ಮತ್ತು ಮಣ್ಣು ಪರೀಕ್ಷೆಯನ್ನು ಮಾಡಿಸದೆ ಕಟ್ಟಿರುವುದು ಗಮನಕ್ಕೆ ಬಂದಿದೆಯೇ ?

ಇ) ಇದಕ್ಕೆ ಒಟ್ಟು ಎಷ್ಟು ಹೊತ್ತವನ್ನು ವಿರ್ಚು ಮಾಡಲಾಗಿದೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ಹಾಸನ ತಾಲ್ಲೂಕು ದುದ್ದ ಮಂಡಲ ಪಂಚಾಯಿತಿಯವರು ಅಂಗಡಿ ಮಳಿಗೆಗಳನ್ನು ನಿರ್ಮಿಸಲು ಕೈಗೊಂಡಿರುವ ಕ್ರಮವು ಸರ್ಕಾರದ ಗಮನಕ್ಕೆ ಬಂದಿದೆ.

ಆ) ದಿನಾಂಕ ೮-೬-೯೦ ರಂದು ಕೊಟ್ಟಿರುವ ತಾಂತ್ರಿಕ ಮಂಜೂರಾತಿಯನ್ನು ಮಣ್ಣು ಪರೀಕ್ಷೆ ಮಾಡಿಸಿಲ್ಲವೆಂದು ದಿನಾಂಕ ೧೨-೬-೯೦ ರಂದು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಈಗ ಬಂದಿರುತ್ತದೆ.

ಇ) ಕಾರ್ಯಗತವಾದ ಕಾಮಗಾರಿಯ ವೆಚ್ಚವು ಸುಮಾರು ೧೦,೫೦೦-೦೦ ರೂ. ಗಳಾಗಿರುತ್ತದೆ ಈ ವರೆಗೆ ಯಾವ ಹೊತ್ತವನ್ನು ಪಾವತಿ ಮಾಡಿರುವುದಿಲ್ಲ.

ಹಾಸನ ಡೈರಿಯಲ್ಲಿ ನೌಕರರ ಮಜಾ ಮಾಡಿರುವ ಬಗ್ಗೆ

ಶ್ರೀ(ಡಿ.ಟಿ.ಲಿ) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹಾಸನದ ಡೈರಿಯಲ್ಲಿ ಎಷ್ಟು ಜನ ನೌಕರರು ಕೆಲಸದಿಂದ ಮಜಾ ಆಗಿದ್ದಾರೆ?

ಆ) ಕೆಲಸದಿಂದ ಮಜಾ ಆದವರ ಹುದ್ದೆ ಮತ್ತು ವಿವರ ಕೊಡುವುದು?

ಇ) ಈ ರೀತಿ ಕೆಲಸದಿಂದ ಮಜಾ ಆಗಲು ಕಾರಣಗಳು ಏನು?

ಈ) ಇವರುಗಳಲ್ಲಿ ಎಷ್ಟು ಜನ ಅಧಿಕಾರಿಗಳು ಮಜಾ ಆರ್ಡರ್ ವಿರುದ್ಧ ಲೇಬರ್ ಕೋರ್ಟ್‌ಗೆ ಯಾವ ಯಾವ ತಾರೀಖಿನಂಗಳಲ್ಲಿ ಪಿರ್ಯಾದು ಸಲ್ಲಿಸಿದ್ದಾರೆ? (ವಿವರ ಕೊಡುವುದು)

ಶ್ರೀ ಬಿ ಬಸವಲಿಂಗಪ್ಪ (ಪಶು ಸಂಗೋಪನೆ ಮತ್ತು ಅರಣ್ಯ ಸಚಿವರು). –

ಅ) ೫ಳ ಮಂದಿ.

ಆ) ವಿವರಗಳನ್ನು ಅನುಬಂಧ–I ರಲ್ಲಿ ಕೊಡಲಾಗಿದೆ.

ಇ) ೩ ಮಂದಿ ಕೆಲಸಕ್ಕೆ ಗೈರು ಹಾಜರಾದ ಕಾರಣ ಹಾಗೂ ೫೧ ಮಂದಿಯ ಸೇವೆ ಅವಶ್ಯಕತೆ ಇಲ್ಲವೆಂದು ಮುಂದೆ ಬಂದ ಆಡಳಿತ ವರ್ಗವು ಮನಗಂಡದ್ದರಿಂದ ವಜಾ ಮಾಡಲಾಗಿದೆ.

ಈ) ೪ ಮಂದಿ, ವಿವರ ಕೆಳಕಂಡಂತಿದೆ.

	ಹೆಸರು	ದಿನಾಂಕ
೧)	ಚಲುವೇಗೌಡ	೭–೧೧–೧೯೮೮
೨)	ಮಂಚೇಗೌಡ	೯–೯–೧೯೮೮
೩)	ಕೃಷ್ಣೇಗೌಡ	೫–೧೧–೧೯೮೮
೪)	ಲಕ್ಷ್ಮೇಗೌಡ ಎನ್. ಆರ್.	೫–೧೧–೧೯೮೮

ಅನುಬಂಧ–I

ದಿನಾಂಕ ೧ನೇ ಜೂನ್ ೧೯೮೭ ರಿಂದ ೧೨ ಜನ ವಜಾ ಆಗಿರುತ್ತಾರೆ. ಅವರುಗಳ ವಿವರ ಈ ರೀತಿ ಇದೆ.

ಕ್ರಮ ಸಂಖ್ಯೆ	ನೌಕರರ ಹೆಸರು	ಹುದ್ದೆ	ವಜಾ ಆದ ದಿನಾಂಕ	ಕಾರಣ
	ಶ್ರೀಯುತರಾದ			
೧	ಗುರುಮೂರ್ತಿ	ಆಕಸ್ಮಿಕ ನೌಕರರು	೨೧–೩–೮೮	೧೪–೧೨–೮೭ ರಿಂದ ಗೈರು ಹಾಜರಾದ ಕಾರಣ.
೨	ಗೌಸ್ ಪೀರ್	ಆಕಸ್ಮಿಕ ನೌಕರರು	೬–೪–೮೮	೧೬–೧–೮೮ ರಿಂದ ಅನಧಿಕೃತ ಗೈರು ಹಾಜರಾದ ಕಾರಣ.
೩	ಭಾನುಪ್ರಸಾದ್	ತಾ. ಅಧಿಕಾರಿ	೧–೨–೮೮	೭–೮–೮೭ ರಿಂದ ಅನಧಿಕೃತ ಗೈರು ಹಾಜರಾದ ಕಾರಣ.
೪	ಎನ್. ಆರ್. ಲಕ್ಷ್ಮೇಗೌಡ	ಆಕಸ್ಮಿಕ ನೌಕರರು	೧೯–೧೦–೮೭	ಸೇವೆ ಅವಶ್ಯವಿಲ್ಲವೆಂದು ಕಂಡು ಬಂದದ್ದರಿಂದ.
೫	ಮಂಚೇಗೌಡ	–,,–	೧೬–೧೦–೮೭	–,,–
೬	ಕೃಷ್ಣೇಗೌಡ	–,,–	೧೬–೧೦–೮೭	–,,–
೭	ಚಲುವೇಗೌಡ	–,,–	೧೬–೧೦–೮೭	–,,–
೮	ಬಿ. ಆರ್. ರಂಗರಾಜು	–,,–	೧೯–೧೦–೮೭	–,,–
೯	ಈಶ್ವರಪ್ಪ	–,,–	೧೯–೧೦–೮೭	–,,–
೧೦	ದೊರೆಸ್ವಾಮಿ	–,,–	೧೬–೮–೮೯	–,,–
೧೧	ಬೋರೇಗೌಡ	–,,–	೧೬–೮–೮೯	–,,–
೧೨	ಅರುಣ್‌ಕುಮಾರ್	–,,–	೩೧–೧೨–೮೮	–,,–

ಇದಲ್ಲದೇ ೪೨ (ನಲವತ್ತೆರಡು) ಮಂದಿ ದಿನಗೂಲಿ ನೌಕರರುಗಳನ್ನು ಅಂದಿನ ವ್ಯವಸ್ಥಾಪಕ ನಿರ್ದೇಶಕರು ಅವರುಗಳ ಸೇವೆ ಅವಶ್ಯವಿಲ್ಲವೆಂದು ಮನಗಂಡಿರುವುದರಿಂದ ದಿನಾಂಕ ೧೨ನೇ ಅಕ್ಟೋಬರ್ ೧೯೮೭ ರಿಂದ ಪಡಾ ಮಾಡಲಾಗಿದೆ.

ಶ್ರೀಯುತ/ಶ್ರೀಮತಿಯರಾದ

೧	ಹೆಚ್. ಆರ್. ಕೃಷ್ಣೇಗೌಡ	೨೨	ಹೆಚ್. ಜಯಮ್ಮ
೨	ಬಿ. ವಿ. ಬಸವರಾಜ್	೨೩	ಲಕ್ಷ್ಮಣ ಕುಂಶಿ
೩	ಎನ್. ಹೆಚ್. ಕುಮಾರ್	೨೪	ಬಿ. ಮಂಚೇಗೌಡ
೪	ರಾಮಚಂದ್ರ	೨೫	ಎಂ. ವಿ. ರಂಗಸ್ವಾಮಿ
೫	ಸಂಪತ್ ಕುಮಾರ್	೨೬	ಕೆ. ಡಿ. ಜಗದೀಶ್
೬	ಬಿ. ರಂಗಸ್ವಾಮಿ	೨೭	ಪುಟ್ಟತಾಯಮ್ಮ
೭	ಬಿ. ಆರ್. ಹರೀಶ್ ಕುಮಾರ್	೨೮	ಆಣ್ಣೇಗೌಡ
೮	ಬಿ. ಮಂಜುನಾಥ್	೨೯	ವೀರಭದ್ರಯ್ಯ
೯	ಪುಟಾಣಿ	೩೦	ಶಿವಸ್ವಾಮಿ
೧೦	ಇಂದಿರಮ್ಮ	೩೧	ಜಯರಾಮ್
೧೧	ಹೊನ್ನೇಗೌಡ	೩೨	ಫಣಿಯಾಚಾರ್
೧೨	ಬೆಟ್ಟಮ್ಮ	೩೩	ಮಿರ್ಜಾವೀರ್‌ದೊಸ್ ಆಲಿ
೧೩	ಅರುಣ	೩೪	ಮಿರ್ಜಾ ಅಮಾನತ್ ಆಲಿ
೧೪	ಹೆಚ್. ಎ. ರಮೇಶ್	೩೫	ಅಬ್ದುಲ್ ಗಾಫರ್
೧೫	ಹೆಚ್. ಎಂ. ನಾಗೇಗೌಡ	೩೬	ಬಿ. ನಾಗೇಶ್
೧೬	ಬಿ. ಟಿ. ನಿಂಗರಾಜು	೩೭	ಮಂಜುನಾಥ್
೧೭	ಕೆ. ರಂಗಸ್ವಾಮಿ	೩೮	ಮಲ್ಲಶೆಟ್ಟಿ
೧೮	ಹೆಚ್. ಕುಮಾರ್	೩೯	ಬಿ. ಕೆ. ರಮೇಶ್
೧೯	ಹನುಮೇಗೌಡ	೪೦	ಈಶ್ವರಪ್ಪ
೨೦	ಎನ್. ಕೆ. ಶಿವಸ್ವಾಮಿ	೪೧	ಬಿ. ಇ. ಶಿವಯ್ಯ
೨೧	ಜಯಮ್ಮ	೪೨	ಮುರುಗೇಶ್

ಸುಳ್ಯ ಮಂಡಲ ಪಂಚಾಯತಿಯಲ್ಲಿ ಹಣ ದುರುಪಯೋಗ

೯೦೦(೧೬೬೮) ಶ್ರೀ ಕೆ. ಕುಶಾಲ (ಸುಳ್ಯ). —ಪಾನ್ಯ ಗ್ರಾಮೀಣ ಪಂಚಾಯತಿ ರಾಜ್ಯ ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ : —

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮಂಡಲ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ನೀಡುವ ಶೇ. ೨೦ ರ ಅನುದಾನದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರೀತಿ ದುರುಪಯೋಗವಾಗಿರುವ ಹಣದ ಮೊತ್ತವೆಷ್ಟು?

ಇ) ಈ ರೀತಿ ದುರುಪಯೋಗ ಮಾಡಿದವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು?